# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಕಾರ್ಯ ಯೋಜನೆಯಡಿ ದಾವಣಗೆರೆ ಜಿಲ್ಲೆಯ 12 ಜೀತ ವಿಮುಕ್ತರಿಗೆ 2011-12ನೇ ಸಾಲಿನಲ್ಲಿ ಕೇಂದ್ರದ ಹಾಗೂ ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂ.ಗ್ರಾಅಪ.1.ಆರ್‌ಬಿಎಲ್.2010 ಬೆಂಗಳೂರು, ದಿ:11.03.2011.
2. ಕಾರ್ಮಿಕ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂ.ಎಸ್-11011/5/98-ಬಿಎಲ್(Vo.II) ದಿನಾಂಕ: 28.11.2011.

****

**ಪ್ರಸ್ತಾವನೆ:-**

ಕೇಂದ್ರ ಪುರಸ್ಕೃತ ಜೀತವಿಮುಕ್ತರ ಕಾರ್ಯ ಯೋಜನೆಯಡಿ ಪ್ರತಿ ಜೀತವಿಮುಕ್ತರ ಪುನರ್ವಸತಿಗಾಗಿ ತಲಾ ರೂ.20,000/- ಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇ.50:50ರ ಅನುಪಾತದಲ್ಲಿ ಒದಗಿಸಬೇಕಾಗಿರುತ್ತದೆ. ಅದರಂತೆ, ಕೇಂದ್ರ ಸರ್ಕಾರವು ಮೇಲೆ ಓದಲಾದ ಕ್ರಮ ಸಂ.(1)ರ ಆದೇಶದಲ್ಲಿ ಕೇಂದ್ರದ ಪಾಲಿನ ಅನುದಾನ ರೂ.7.30 ಲಕ್ಷಗಳನ್ನು ರಾಜ್ಯ ಸರ್ಕಾರಕ್ಕೆ ನೇರವಾಗಿ ಬಿಡುಗಡೆ ಮಾಡಿರುತ್ತದೆ.

ರಾಜ್ಯಾದ್ಯಂತ ಕೈಗೊಳ್ಳಲಾದ ಮರು ಸಮೀಕ್ಷೆಯಲ್ಲಿ 2004-05ನೇ ಹಾಗೂ 2006-07ನೇ ಸಾಲುಗಳಲ್ಲಿ ಬೆಂಗಳೂರು ಗ್ರಾಮಾಂತರ/ರಾಮನಗರ (25)/ಕೊಡಗು(01)/ಮೈಸೂರು(31)/ತುಮಕೂರು (04) ಜಿಲ್ಲೆಗಳಲ್ಲಿ ಒಟ್ಟು ಗುರುತಿಸಲ್ಪಟ್ಟ 61 ಜೀತದಾಳುಗಳಿಗೆ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಕಾರ್ಯ ಯೋಜನೆಯಡಿ ಪುನರ್ವಸತಿ ಸಹಾಯಧನವು ಕೇಂದ್ರದಿಂದ ಸಕಾಲದಲ್ಲಿ ರಾಜ್ಯಕ್ಕೆ ದೊರೆಯದಿರುವ ಹಿನ್ನೆಲೆಯಲ್ಲಿ ಸದರಿ ಜೀತದಾಳುಗಳು ಪುನ: ಜೀತಗಾರಿಕೆಯ ಕಸುಬಿಗೆ ಹಿಂದಿರುಗುವ ಸಂದರ್ಭಗಳು ಇದ್ದು, ಇವರ ಜೀವನಮಟ್ಟವು ಸುಧಾರಣೆಗೊಳ್ಳದಿರುವುದರಿಂದ ಹಾಗೂ ಇವರುಗಳಿಗೆ ಪುನರ್ವಸತಿ ಸೌಲಭ್ಯವು ದೀರ್ಘ ಅವಧಿಯವರೆಗೆ ದೊರಕದಿರುವ ಹಿನ್ನೆಲೆಯಲ್ಲಿ ಕೇಂದ್ರದ ಪಾಲಿನ ಪುನರ್ ವಸತಿ ಸಹಾಯಧನವನ್ನು ನಿರೀಕ್ಷಿಸಿ, ರಾಜ್ಯದ ಆಯವ್ಯಯದಡಿ ಜೀತದಾಳುಗಳ ಪುನರ್ವಸತಿ ಯೋಜನೆಯ ಕಾರ್ಯಕ್ರಮಕ್ಕಾಗಿ 2010-11ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2230-01-198-6-01(ಯೋಜನೆ)ಯಡಿ ರಾಜ್ಯದ ಭಾಗದಲ್ಲಿ ಲಭ್ಯವಿದ್ದ ಅನುದಾನದಿಂದ ಕೇಂದ್ರ ಹಾಗೂ ರಾಜ್ಯದ ಪಾಲಿನ ಪುನರ್ ವಸತಿ ಅನುದಾನ ರೂ.12.20 ಲಕ್ಷಗಳನ್ನು (ರೂ.ಹನ್ನೆರಡು ಲಕ್ಷ ಇಪ್ಪತ್ತು ಸಾವಿರ ಮಾತ್ರ) 61 ಜೀತವಿಮುಕ್ತರಿಗೆ ಉಲ್ಲೇಖ(1)ರ ಆದೇಶದಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ ಉಲ್ಲೇಖ(2)ರ ಆದೇಶದಲ್ಲಿ ಕೇಂದ್ರ ಕಾರ್ಮಿಕ ಮಂತ್ರಾಲಯವು ಉಲ್ಲೇಖಿಸಿರುವ 73 ಜೀತವಿಮುಕ್ತರಲ್ಲಿ ಮೇಲ್ಕಂಡ 61 ಜೀತವಿಮುಕ್ತರು ಹಾಗೂ ದಾವಣಗೆರೆಗೆ ಸೇರಿದ 12 ಜೀತವಿಮುಕ್ತರು ಸೇರಿರುತ್ತಾರೆ. ಆದ್ದರಿಂದ, ಈಗ ದಾವಣಗೆರೆ ಜಿಲ್ಲೆಗೆ ಸೇರಿದ 12 ಜೀತವಿಮುಕ್ತರಿಗೆ ಮಾತ್ರ ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನವನ್ನು 2011-12ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಡಿ ಜೀತದಾಳುಗಳ ಪುನರ್ವಸತಿ ಯೋಜನೆಯ ಕಾರ್ಯಕ್ರಮಕ್ಕಾಗಿ ಲೆಕ್ಕಶೀರ್ಷಿಕೆ 2230-01-198-6-01 (2230-01-101-0-01)ರಡಿ ಲಭ್ಯವಿರುವ ಅನುದಾನದಿಂದ (ಕೋಷ್ಟಕದ ಕ್ರಮ ಸಂಖ್ಯೆ:8ರಲ್ಲಿ ತೋರಿಸಿರುವಂತೆ) ಬಿಡುಗಡೆ ಮಾಡಲು ನಿರ್ಧರಿಸಿದೆ. ಹಾಗೂ ಈ ಕೆಳಕಂಡ **ಕೋಷ್ಟಕದ ಕ್ರಮ ಸಂಖ್ಯೆ 5ರಲ್ಲಿ ನಮೂದಿಸಿರುವ ರೂ.12.20 ಲಕ್ಷಗಳ ಪೈಕಿ ರೂ.6.10ಲಕ್ಷಗಳ ಅನುದಾನವು ಕೇಂದ್ರದ ಪಾಲಾಗಿರುವ ಹಿನ್ನೆಲೆಯಲ್ಲಿ ಸದರಿ ಅನುದಾನವನ್ನು 2011-12ನೇ ಸಾಲಿನ ರಾಜ್ಯದ ಆಯವ್ಯಯದಡಿ ಒದಗಿಸಲಾದ ರಾಜ್ಯದ ಹಂಚಿಕೆಯ ಭಾಗಕ್ಕೆ ಮರುಹೊಂದಾಣಿಕೆಯ ಮುಖಾಂತರ ವಾಪಸ್ಸು ಪಡೆಯಲಾಗಿದೆ.** ಹಾಗೂ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

## ಸರ್ಕಾರದ ಆದೇಶ ಸಂ.ಗ್ರಾಅಪ.16.ಆರ್‌ಬಿಎಲ್.2011 ಬೆಂಗಳೂರು, ದಿನಾಂಕ: 21-01 -2012

ತಮಿಳುನಾಡು ರಾಜ್ಯದಲ್ಲಿ 2008-09ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಗೆ ಸೇರಿರುವ 12 ಜೀತದಾಳುಗಳನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ್ದು, ಈ ಜೀತವಿಮುಕ್ತರಿಗೆ ಕೇಂದ್ರ ಪುರಸ್ಕೃತ ಜೀತವಿಮುಕ್ತರ ಕಾರ್ಯ ಯೋಜನೆಯಡಿ ಪುನರ್ವಸತಿ ಕಲ್ಪಿಸಲು ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನ ರೂ.2.40 ಲಕ್ಷಗಳನ್ನು (ರೂ.ಎರಡು ಲಕ್ಷ ನಲವತ್ತು ಸಾವಿರ ಮಾತ್ರ) ಕೆಳಕಂಡ ಕೋಷ್ಟಕದಂತೆ ದಾವಣಗೆರೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2230-ಕಾರ್ಮಿಕ ಮತ್ತು ಉದ್ಯೋಗ-01-ಕಾರ್ಮಿಕ-198-ಗ್ರಾಮ ಪಂಚಾಯಿತಿಗಳಿಗೆ ಸಹಾಯ-6-ಗ್ರಾಮ ಪಂಚಾಯಿತಿಗಳು-ಕೇಂದ್ರ ಪುರಸ್ಕೃತ ಯೋಜನೆ (ಜೀತದಾಳುಗಳ ಪುನರ್‌ವಸತಿ)-01-ಬ್ಲಾಕ್ ಅನುದಾನ-300-ಒಟ್ಟು ಜಿಲ್ಲಾ ಪಂಚಾಯಿತಿ (ಯೋಜನೆ)ಗೆ ಜಮಾ ಮಾಡತಕ್ಕದ್ದು.

## ಕೋಷ್ಟಕ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲಾ ಪಂ. ಹೆಸರು | ಪುನರ್ವಸತಿ ಗೊಳ್ಳಬೇಕಾದ ಜೀತವಿಮುಕ್ತರ ಸಂಖ್ಯೆ | ಕೇಂದ್ರ ಸರ್ಕಾರವು ದಿ:28.11.2011 ರಂದು ಬಿಡುಗಡೆ ಗೊಳಿಸಿರುವ ಕೇಂದ್ರದ ಪಾಲಿನ ಅನುದಾನ | ರಾಜ್ಯ ಸರ್ಕಾರವು ರಾಜ್ಯದಆಯವ್ಯಯದಿಂದ ದಿ:11.3.11ರಂದು (2010-11) ಈಗಾಗಲೇ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಕೇಂದ್ರ ಹಾಗೂ ರಾಜ್ಯದ ಪಾಲಿನ ಪುನರ್ವಸತಿ ಅನುದಾನ (ಅನುಪಾತ 50:50ರಂತೆ) | ಕೇಂದ್ರ ಸರ್ಕಾರವು ಕಲಂ 4ರಲ್ಲಿ ತೋರಿಸಿರುವಂತೆ ಬಿಡುಗಡೆ ಗೊಳಿಸಿರುವ ತನ್ನ ಪಾಲಿನ ಪುನರ್‌ವಸತಿ ಅನುದಾನ | ರಾಜ್ಯಸರ್ಕಾರವು ಕಲಂ6ಕ್ಕೆ ಎದುರಾಗಿ ಈಗ ಬಿಡುಗಡೆ ಗೊಳಿಸುತ್ತಿರುವ ತನ್ನ ಪಾಲಿನ ಪುನರ್‌ವಸತಿ ಅನುದಾನ | **2011-12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2230-01-198-6-01 (2230-01-101-0-01)ರಡಿ ಈಗ ಬಿಡುಗಡೆಗೊಳಿಸುತ್ತಿರುವ ಒಟ್ಟು ಅನುದಾನ (6+7)** |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಬೆಂಗಳೂರು(ಗ್ರಾ) | 25 | 2.50 | 5.00 | - | - | - |
| 2 | ಕೊಡಗು | 01 | 0.10 | 0.20 | - | - | - |
| 3 | ಮೈಸೂರು | 31 | 3.10 | 6.20 | - | - | - |
| 4 | ತುಮಕೂರು | 04 | 0.40 | 0.80 | - | - | - |
| 5 | ದಾವಣಗೆರೆ | 12 | 1.20 | - | **1.20** | **1.20** | **2.40** |
| | ಒಟ್ಟು: | **73** | **7.30** | **12.20** | **1.20** | **1.20** | **2.40** |

ಮೇಲ್ಕಂಡ ಕೋಷ್ಟಕದ ಕಲಂ 4ರಲ್ಲಿ ನಮೂದಿಸಿರುವ ರೂ.7.30ಲಕ್ಷದಲ್ಲಿ, ರೂ.6.10ಲಕ್ಷವು 2011-12ನೇ ಸಾಲಿನ ರಾಜ್ಯದ ಆಯವ್ಯಯಕ್ಕೆ ಮರು ಹೊಂದಾಣಿಕೆ ಮಾಡಲಾಗಿದೆ. ಉಳಿಕೆ ರೂ.1.20ಲಕ್ಷಗಳಿಗೆ ರಾಜ್ಯದ ಪಾಲು ರೂ.1.20ಲಕ್ಷಗಳನ್ನು ಸೇರಿಸಿ ಒಟ್ಟಾಗಿ ರೂ.2.40 ಲಕ್ಷ ಅನುದಾನವನ್ನು ಈಗ ಬಿಡುಗಡೆಗೊಳಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ದಾವಣಗೆರೆ ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಲು ಅನುಮತಿಸಲಾಗಿದೆ.

1. ಕೋಷ್ಟಕದಲ್ಲಿ ತೋರಿಸಿರುವ ತಮ್ಮ ಜಿಲ್ಲೆಯ 12 ಜನ ಜೀತವಿಮುಕ್ತರು ಈ ಹಿಂದೆ ಜೀತದಾಳುಗಳಾಗಿದ್ದರು ಹಾಗೂ ಅವರನ್ನು ಜೀತಕ್ಕಿರಿಸಿಕೊಂಡಿದ್ದ ಮಾಲೀಕರನ್ನು ಫಿರ್ಯಾದು ಮಾಡಲು ಪ್ರತ್ಯೇಕವಾಗಿ ಕ್ರಮ ತೆಗೆದುಕೊಳ್ಳಲಾಗುತ್ತೆಂಬ ಬಗ್ಗೆ ಧೃಢೀಕರಣವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು, ಸದರಿ ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವುದು.
2. ರಾಜ್ಯ ಸರ್ಕಾರದ ದಿನಾಂಕ:11-10-2011 ಹಾಗೂ 15-10-2011ರ ಅರೆ ಸರ್ಕಾರಿ ಪತ್ರ ಸಂ.ಆರ್ ಡಿಪಿ.26.ಆರ್ ಜಿಎಲ್.2000 ದೊಂದಿಗೆ ಕಲಮವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಹಾಗೇ ಎಲ್ಲಾ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಕಳುಹಿಸಿರುವ ಕೇಂದ್ರ ಸರ್ಕಾರದ ದಿ:8-8-2000ರ ಆದೇಶ ಸಂ.ಆರ್-11011/02/08-ಜಿಎಲ್ ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಅನುಸಾರ ಪುನರ್ವಸತಿ ಧನವನ್ನು ವೆಚ್ಚ ಮಾಡತಕ್ಕದ್ದು.
3. ಭಾರತದ ಕಂಟ್ರೋಲರ್ ಮತ್ತು ಮಹಾಲೇಖಪಾಲರು ಇಚ್ಛೆಪಟ್ಟಲ್ಲಿ ಟೆಸ್ಟ್ ಚೆಕ್‌ಗೆ ಒದಗಿಸಲು ಪ್ರತಿ ಯೋಜನೆವಾರು ವೆಚ್ಚದ ಲೆಕ್ಕಪತ್ರಗಳನ್ನು ಸದರಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ವಹಿಸತಕ್ಕದ್ದು.
4. 1976ರ ಜೀತಗಾರಿಕೆ ಪದ್ಧತಿ(ನಿರ್ಮೂಲನ) ಕಾಯ್ದೆ ಹಾಗೂ ಅದರಡಿ ರೂಪಿಸಿರುವ ನಿಯಮಗಳಂತೆ ಗುರುತಿಸಿ ಜೀತಪದ್ಧತಿಯಿಂದ ಬಿಡುಗಡೆಗೊಳಿಸಲಾದ ಜೀತವಿಮುಕ್ತರಿಗೆ ಮಾತ್ರ ಈ ಯೋಜನೆಯಡಿ ಸಹಾಯಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.
5. ಈ ಯೋಜನೆಯಡಿ ಪುನರ್ವಸತಿ ಸೌಲಭ್ಯವನ್ನು ಒದಗಿಸುವಾಗ ಸುಮಾರು 5 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಜೀತಪದ್ಧತಿಯಡಿ ಸಂಕಷ್ಟದಲ್ಲಿದ್ದಂತಹ ಜೀತದಾಳುಗಳಿಗೆ [illegible]

6. ಬಿಡುಗಡೆ ಮಾಡಿರುವ ಅನುದಾನವನ್ನು ಪ್ರಸಕ್ತ ಸಾಲಿನಲ್ಲೇ ಖಜಾನೆಯಿಂದ ಸೆಳೆದು ಯಾವುದೇ ಕಾರಣಕ್ಕೂ ಕಾಯ್ದಿರಿಸದೇ ಜೀತವಿಮುಕ್ತರ ಪುನರ್ವಸತಿಗಾಗಿ ಕೂಡಲೇ ಬಳಕೆ ಮಾಡತಕ್ಕದ್ದು.

7. ವೆಚ್ಚ ಮಾಡಲಾದ ಅನುದಾನಕ್ಕೆ ಹಣಬಳಕೆ ಪ್ರಮಾಣಪತ್ರ ಹಾಗೂ ಆಡಿಟ್ ಮಾಡಲಾದ ತಃಖ್ತೆಗಳನ್ನು ಸರ್ಕಾರಕ್ಕೆ 15 ದಿನದೊಳಗಾಗಿ ತಪ್ಪದೇ ಕಳುಹಿಸತಕ್ಕದ್ದು. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಪ್ರತಿ ಮಾಹೆಯೂ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಗಳನ್ನು ಹಾಗೂ ಅರ್ಧವಾರ್ಷಿಕ ಪ್ರಗತಿ ವರದಿಯನ್ನು ನಿಯತಕಾಲಿಕವಾಗಿ ತಪ್ಪದೇ ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಕಳುಹಿಸತಕ್ಕದ್ದು.

8. ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂ.ಗ್ರಾಅಪೆ.11 ಪ್ರಿ29 ವೆಚ್ಚ 2011-12 ದಿನಾಂಕ: 21.01.2012 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
21/1/2012
(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ರವರಿಗೆ ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ.

ಪ್ರತಿಯನ್ನು:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ಜಿಲ್ಲಾಧಿಕಾರಿ, ದಾವಣಗೆರೆ
3) ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ದಾವಣಗೆರೆ
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ
5) ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ
6) ಉಪ ಕಾರ್ಯದರ್ಶಿ(ಅಭಿ), ಜಿಲ್ಲಾ ಪಂಚಾಯಿತಿ, ದಾವಣಗೆರೆ
7) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು
8) ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
9) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
10) ಜಿಲ್ಲಾ ಖಜಾನಾಧಿಕಾರಿ, ಬಳ್ಳಾರಿ ಜಿಲ್ಲೆ.
11) ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು
12) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-6, ವಿಧಾನಸೌಧ, ಬೆಂಗಳೂರು
13) ಆಂತರಿಕ ಆರ್ಥಿಕ ಸಲಹೆಗಾರರು/ ನಿರ್ದೇಶಕರು, ಯೋಜನಾ ವಿಭಾಗ/ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ/ ಮಾಹಿತಿ ಅಧಿಕಾರಿ (ವೆಬ್‌ಸೈಟ್ ವಿಭಾಗ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
14) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂಚಾಯತ್‌ರಾಜ್)ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
15) ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
16) ಹೆಚ್ಚುವರಿ ಪ್ರತಿಗಳು